ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ, ಕೊಠಡಿ ನಂ.123.
ದೂರವಾಣಿ: 08372–231877 ಫ್ಯಾಕ್ಸ: 08372–236135 ಇ–ಮೇಲ್: dudc gdg@yahoo.co.in

ಸಂಖ್ಯೆ:ಜಿನಕೋ/ಸಿಬ್ಬಂಧಿ/ಅ.ಕ.ನೇ. /ವಹಿ/ 164/2017–18 ದಿನಾಂಕ: 16–01–2018

## ಪತ್ರಿಕಾ ಪ್ರಕಟಣೆ

ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗದಲ್ಲಿ ಹೊಸದಾಗಿ ಸೃಜಿಸಲಾಗಿರುವ ಅಕೌಂಟ ಕನ್ಸ್‌ಲ್ಟೆಂಟ್ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಎಂ.ಕಾಂ. ಪದವಿ ಹೊಂದಿದ ಕನಿಷ್ಠ 5 ವರ್ಷ ಅಕೌಂಟಿಂಗ್ & ಆಡಿಟ್‌ನಲ್ಲಿ ಅನುಭವವುಳ್ಳ ಹಾಗೂ ಕಂಪ್ಯೂಟರ್ ಜ್ಞಾನವುಳ್ಳವರಾಗಿದ್ದು ಎಂ.ಎಸ್. ಆಫೀಸ್ & ಎಕ್ಸೆಲ್ ಹಾಗೂ ಟ್ಯಾಲಿಯಲ್ಲಿ ಅನುಭವವುಳ್ಳವರಾದ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಹೊಂದುವ ಅಭ್ಯರ್ಥಿಗೆ ಮಾಸಿಕ ರೂ.30,000/– ವೇತನ ಹಾಗೂ ನಿಯಮಾನುಸಾರ ಟಿ.ಎ./ಡಿ.ಎ. ನೀಡಲಾಗುವುದು.

ಅಭ್ಯರ್ಥಿಗಳ ನೇಮಕಾತಿ ಸಂಪೂರ್ಣ ಗುತ್ತಿಗೆ ಆಧಾರವಾಗಿದ್ದು ಅರ್ಹತೆ ಸರ್ಕಾರದ ನಿಯಮ/ ಸುತ್ತೋಲೆಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಗುತ್ತಿಗೆ ಅವಧಿಯು ಪ್ರಾಥಮಿಕವಾಗಿ ಒಂದು ವರ್ಷ ಅವಧಿಯಾಗಿದ್ದು ಒಂದು ವೇಳೆ ಸರ್ಕಾರದ ಯೋಜನೆ ಮುಂದುವರೆದಲ್ಲಿ ಅವಶ್ಯಕತೆ ಇದ್ದಲ್ಲಿ ಗುತ್ತಿಗೆ ಅವಧಿಯನ್ನು ಅಭ್ಯರ್ಥಿಗಳ ತೃಪ್ತಿಕರ ಸೇವೆಯನ್ನು ಆಧರಿಸಿ ಸರ್ಕಾರದ ಪೂರ್ವಾನುಮತಿಯೊಡನೆ ಮತ್ತೊಂದು ವರ್ಷದ ಅವಧಿಗೆ ಮುಂದುವರೆಸಬಹುದಾಗಿದ್ದು. ಯಾವುದೇ ಕಾರಣಕ್ಕೂ ಅಭ್ಯರ್ಥಿಳನ್ನು ಖಾಯಂಗೊಳಿಸಲಾಗುವುದಿಲ್ಲ.

ಆಸಕ್ತವುಳ್ಳ ಅಭ್ಯರ್ಥಿಗಳು ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗ ವೆಬಸೈಟ್ : www.gadag.nic.in & www.gadagdudc.mrc.gov.in ನಲ್ಲಿ ಪ್ರಕಟಿಸಿದ ಅರ್ಜಿ ನಮೂನೆಯನ್ನು ಪಡೆದು ಅರ್ಜಿಯೊಂದಿಗೆ ಬಯೋಡೆಟಾ, ಶೈಕ್ಷಣಿಕ್ ಹಾಗೂ ಅನುಭವ ಪ್ರಮಾಣ ಪತ್ರಗಳ ನಕಲು ಪ್ರತಿಗಳನ್ನು ಧೃಡೀಕರಣದೊಂದಿಗೆ ದಿನಾಂಕ31–01–2018 ರ ಸಂಜೆ 5–00 ಒಳಗಾಗಿ ಈ ಯೋಜನಾ ನಿರ್ದೇಶಕರು ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಠಡಿ ಸಂಖ್ಯೆ 123, 1ನೇ ಮಹಡಿ ಜಿಲ್ಲಾಧಿಕಾರಿಗಳ ಕಾರ್ಯಾಲಯ ಗದಗ ಇಲ್ಲಿಗೆ ತಲುಪುವಂತೆ ಸಲ್ಲಿಸಲು ತಿಳಿಸಿದೆ.

ಜಿಲ್ಲಾಧಿಕಾರಿಗಳು ಗದಗ.

ಪ್ರತಿ: ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಗದಗ ಇವರಿಗೆ. ಮೇಲಿನ ವಿಷಯವನ್ನು ಎಲ್ಲಾ ದಿನಪತ್ರಿಕೆಗಳಲ್ಲಿ ಸುದ್ದಿ ಅಂತಾ ಪ್ರಕಟಿಸಲು ಕ್ರಮ ಕೈಗೊಳ್ಳಲು ಕೋರಿದೆ.